

# ರೇಖಾ ರಾಜು ಮೋಹಿನಿಯಾಟ್ಟಂ ಬೆಳ್ಳಿರೇಖೆ

■ ಉಮಾ ಅನಂತ್

ಮೋಹಿನಿಯಾಟ್ಟಂ ಒಂದು ಸಮ್ಮೋಹಕ ನೃತ್ಯ ಪ್ರಕಾರ. ಕೇರಳದ ಸುಪ್ರಸಿದ್ಧ ನೃತ್ಯಕಲೆಯಾದ ಮೋಹಿನಿಯಾಟ್ಟಂ, ಮೇಲ್ನೋಟಕ್ಕೆ ಭರತನಾಟ್ಯದಂತೆ ಕಂಡರೂ ಅದಕ್ಕಿಂತ ಬಹಳ ಭಿನ್ನ. ಇದು ಹೃದಯಕ್ಕೆ ಹತ್ತಿರವಾದ ನೃತ್ಯ. ಇಲ್ಲಿ ಸೌಮ್ಯ ನಡೆಯಿದ್ದು, ಸಾತ್ವಿಕ ಅಭಿನಯವೇ ಪ್ರಧಾನ. ಸ್ಥೂಲಾರ್ಥದಲ್ಲಿ ಮೋಹಿನಿಯಾಟ್ಟಂ ಎಂದರೆ ಮೋಹಿನಿ–ಮಹಿಳೆ, ಆಟ್ಟಂ ಎಂದರೆ ಆಂಗಿಕ ಅಭಿನಯ.

ಈ ನೃತ್ಯಪ್ರಕಾರವನ್ನು ಕರ್ನಾಟಕದಲ್ಲಿ ಮಾಡುವವರು ವಿರಳಾತಿ ವಿರಳ. ಈ ಸಾಂಪ್ರದಾಯಿಕ ನೃತ್ಯಕಲೆಯನ್ನು ಬೆಂಗಳೂರಿನಲ್ಲಿ ಜನಪ್ರಿಯಗೊಳಿಸಿ ರಾಜ್ಯದಾದ್ಯಂತ ಅಲ್ಲದೆ ವಿದೇಶಗಳಲ್ಲೂ ಪ್ರದರ್ಶನ ನೀಡಿ ಕಲೆಯಲ್ಲಿ ಎತ್ತರಕ್ಕೇರಿದವರು ವಿದುಷಿ ರೇಖಾ ರಾಜು.

ಮೋಹಿನಿಯಾಟ್ಟಂ ಪ್ರಾಚೀನ ನೃತ್ಯ ಕಲೆ. ಆದರೆ ಇದಕ್ಕೆ ಸಮಕಾಲೀನ ನೃತ್ಯಶೈಲಿಯನ್ನೂ ಅಳವಡಿಸಬಹುದು. ಕಳೆದ 25 ವರ್ಷಗಳಿಂದ ಮೋಹಿನಿಯಾಟ್ಟಂನಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದ ರೇಖಾರಾಜು, ಮಲಯಾಳಂ ಗೀತೆಗಳ ಜೊತೆಗೆ ಕನ್ನಡದ ಭಾವಗೀತೆಗಳು, ಡಿವಿಜಿ, ಕುವೆಂಪು ಅವರ ಕವನಗಳು, ದಾಸರ ಪದಗಳನ್ನೂ ಈ ಪ್ರಕಾರದ ನೃತ್ಯಶೈಲಿಗೆ ಅಳವಡಿಸಿ ವಿಶಿಷ್ಟ ಪ್ರಯೋಗ ಮಾಡಿದ್ದಾರೆ. ಅದರಲ್ಲಿ ಯಶಸ್ಸನ್ನೂ ಕಂಡಿದ್ದಾರೆ.